ಕೊಳ್ಳಲಿಕ್ಕೆ ಯಿಷ್ಟಪಟ್ಟಿಳ ಜನಗಳು ತಮ್ಮ ಡಿಪೆಂಚರ್‌ಗಳನ್ನು ಎಷ್ಟೇಸ್‌ಮೆಂಟ್ ಯಾನೇ ಪರಾ ಬಗ್ಗೆ ಇಧರಡಿ ರುಜು ಮಾಡಿರುವರ ಗೆ ಕಳುಹಿಸತಕ್ಕದ್ದು.

ಭಡ್ಡೀಯು, ಮದ್ರಾಸ್‌ನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿಮಾಂಡ್ ಡ್ರಾಫ್ಟ್ಸ್ ಯೆಂಬ ಚೆಕ್ಕುಗಳ ಮೂಲಕ ಏಗಳಾಗಿ ಕೊಡಲ್ಪಡುವದು.

ಎಷ್ಟೇಸ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಹೆಚ್. ಹಡಿರ್ಸ್,
ಕಾಂಪ್ಟ್ರೋಲರ್.

ಅಂಚೇ ಇಲಾಖಾ.

ತಾರೀಖು 1ನೇ ಅಕ್ಟೋಬರ್ 1885.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಪ್ರಕಟಿಸಲ್ಪಡುವದೇನಂದರೆ, ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರ ಆಜ್ಞೆ ಅನುಸರಿಸಿ ಈ ಕೆಳಗೆ ಕಂಡ ಸ್ಥಳಗಳೊಳಗೆ ಹೋಬಳಿ ಅಂಚೆ ಆಫೀಸುಗಳು ಸ್ಥಾಪಿಸಲ್ಪಟ್ಟಿರುತ್ತೆ.:—

ತಾಲ್ಲೂಕು.		ಅಂಚೆ ಆಫೀಸ್ ಸ್ಥಾಪಿಸಲ್ಪಟ್ಟ ಸ್ಥಳಗಳ ಹೆಸರು.
ಕುಣಿಗಲ್	..	ಯಲಿಯೂರು.
ತುಮಕೂರು	..	ಪೊನ್ನುಡಿಕೆ.
ಡಿಟೋ	..	ಪ್ರೂರಪಗೆರೆ
ಡಿಟೋ	..	ಕೊಳಾಲ.

ಬಿ. ಮರಿಗೆಂಗಯ್ಯ, ಅಂಚೆ ಬಕ್ಷಿ.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ರಯವರ ಕೋರ್ಟ್‌ನಲ್ಲಿ.

1885ನೇ ಇಸವಿ ಅರ್ಜೀ ನಂಬರು 466.

ಅರ್ಜಿದಾರ ಹಯಾತ್‌ಸಾಬಿಯು ಯಡತೊರೆ ತಾಲ್ಲೂಕು ಮಿರ್ಲೆ ಸ್ಥಳದ ಮೈನರಾದ ಜಮಾಲ್‌ಖಾನನ ಮಗ ಮೈದರ್‌ಖಾನನ ಆಸ್ತಿ ವಿಷಯದಲ್ಲಿ.

ಸದರೀ ಮೈನರಾದ ಮೈದರ್‌ಖಾನನಿಗೆ ಸೋದರಮಾವ ಆಗಬೇಕೆಂಬ ಹಕ್ಕುದಾರಿ ಮೇಲೆ ಯಡತೊರೆ ತಾಲ್ಲೂಕು ಮಿರ್ಲೆ ಸ್ಥಳದ ಹಯಾತ್‌ಸಾಬಿಯು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರಟಿಫಿಕೇಟ್ ಬಗ್ಗೆ ಅರ್ಜೀ ಕೊಟ್ಟು ಇರುತ್ತಾನೆ.

ಸದರೀ ಅರ್ಜಿ ಹಿಯರಿಂಗ್ ಬಗ್ಗೆ 1885ನೇ ಇಸವಿ ಅಕ್ಟೋಬರ್ ತಾರೀಖು 6ರಲ್ಲಿ ಹೊಕರರು ಮಾಡಿರುವದಾಗಿ. ಇದರಿಂದ ನೋಟಿಸ್ ಕೊಡಲಾಗಿಧೆ.

1885ನೇ ಇಸವಿ ಸೆಪ್ಟಂಬರ್ ತಿಂಗಳು 24ನೇ ತಾರೀಖಿನಲ್ಲಿ ಕೋರ್ಟ್ ಮೊಹರ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ವಿ. ಎ. ನರಸಿಂಹ್ಯಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ನಂಬರ್ 7. ತಾರೀಖು 30ನೇ ಸೆಪ್ಟಂಬರ್ 1885.

ಇದರಿಂದ ತಿಳಿಯಪಡಿಸುವದೇನಂದರೆ ತಿರುಮಕೂಡ್ಲು ನರಸೀಪುರ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಜೇವಾರಸಾಗಿ ಬಾಕೀ ಇರತಕ್ಕ ಕೆಳಗೆ ವಿವರಿಸೋಣಾದ ದಸ್ತಾವೇಜುಗಳನ್ನ ಇವಗಳ ಮಾಲೀಕರಾಗಲೀ ಅಥವಾ ಕ್ರಮರೀತ್ಯಾ ಮೊಖ್ತಾರಿ ಹೊಂದಿದ ಮುತಾಲ್ಲಿಕರಾಗಲಿ